ಓ ಎಸ್ ನಂಃ 300-18
ಪಿ ಡಬ್ಲ್ಯೂ ಃ 1

ದಿಃ 09-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಸಿ ವಿ ಕೆ ವಕೀಲರಿಂದ

18. ನಾನು ಸಾತನೂರುನಲ್ಲಿ ವಾಸವಿದ್ದೇನೆ. ನಾನು ಅರೆಕನೆಟ್ ಪ್ಲೇಟ್ಸ್ ಕಾರ್ಖಾನೆ ಮತ್ತು ಕೋಳಿ ಫಾರಂ ಇಟ್ಟಿರುತ್ತೇನೆ. ನಾನು ಈ ಕೆಲಸವನ್ನು 10 ವರ್ಷಗಳಿಂದ ಮಾಡುತ್ತಿದ್ದೇನೆ. ಈ ಮೊದಲು ನಾನು ಬಿ ಎಂ ಟಿ ಸಿ ಯಲ್ಲಿ ಕೆಲಸ ಮಾಡುತ್ತಿದ್ದೆ. ಇದನ್ನು ಹೊರತುಪಡಿಸಿ ನಾನು ಬೇರೆ ಕೆಲಸ ಮಾಡುವುದಿಲ್ಲ. 2 ನೇ ಪ್ರತಿವಾದಿ ಸಹ ಸಾತನೂರಿನವರಾಗಿರುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ಚಿರಪರಿಚಿತರು ಎಂದರೆ ಹಾಗೇನಿಲ್ಲ ಒಂದೇ ಊರಿನವರು ಎಂದು ಹೇಳುತ್ತಾರೆ.

19. ಪ್ರತಿವಾದಿಗಳ ಕಡೆಯಿಂದ ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುವಾಗ ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ತಾಯಿಯಿಂದ ಮಕ್ಕಳಿಗೆ ಆದ ದಾನಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. ದಾನ ಪತ್ರವನ್ನು ನನಗೆ ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಕೊಡುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ದಾವಾ ಆಸ್ತಿಯ ಖಾತೆ ಯಾರ ಹೆಸರಿನಲ್ಲಿದೆ ನಾನು ಪರಿಶೀಲನೆ ಮಾಡಿಲ್ಲ ಆದರೆ ಖಾತೆ ಮಾಡಿಸುವುದಾಗಿ ಹೇಳಿರುತ್ತಾರೆ. ದಾನ ಪತ್ರ ಯಾವ ದಿನಾಂಕ ನೊಂದಣಿಯಾಗಿರುತ್ತದೆ ನಾನು ನೋಡಿಲ್ಲ ಆದರೆ ದಾನಪತ್ರವನ್ನು ನೋಡಿರುತ್ತೇನೆ. ದಾವಾ ಆಸ್ತಿ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯೋ ಅಥವಾ ಅದು ಅವರ ತಾಯಿಯ ಆಸ್ತಿಯೋ ನಾನು ಪರಿಶೀಲನೆ ಮಾಡಿಲ್ಲ. ದಾನಪತ್ರ ನೊಂದಣೆಯಾಗಿರುತ್ತದೆ.

20. ನಾನು ದಿನಾಂಕಃ 30-11-2017 ರಂದು ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆ. ಕ್ರಯದ ಕರಾರು ಪತ್ರ ಆಗುವಾಗ ನಮ್ಮ ಊರಿನ ಬಸವರಾಜ್ ಮತ್ತು 2 ನೇ ಪ್ರತಿವಾದಿಯ ಭಾವ ಮತ್ತು ಅವರ ಅಕ್ಕ ಹಾಜರಿದ್ದರು. ಕ್ರಯದ ಕರಾರು ಪತ್ರದ ಬರವಣಿಗೆಯನ್ನು ನಾನು ಮತ್ತು ಪ್ರತಿವಾದಿಗಳು ಸೇರಿ ಮಾಡಿಸಿರುತ್ತೇವೆ. ಕ್ರಯದ ಕರಾರು ಪತ್ರದಲ್ಲಿ ಏನು ಬರೆಯಲಾಗಿದೆ ಎಂಬುದನ್ನು ಪ್ರತಿವಾದಿಗಳಿಗೆ ತಿಳಿಸಿರುತ್ತೇನೆ.

21. ಕ್ರಯದ ಕರಾರು ಪತ್ರಕ್ಕೆ ಇಬ್ಬರು ಪ್ರತಿವಾದಿಗಳು ಒಬ್ಬರ ನಂತರ ಒಬ್ಬರಾಗಿ ಸಹಿ ಮಾಡಿರುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಏನು ಬರೆಯಲಾಗಿದೆ ಪ್ರತಿವಾದಿಗಳಿಗೆ ಗೊತ್ತಿಲ್ಲ ಅವರು ಕ್ರಯದ ಕರಾರು ಪತ್ರಕ್ಕೆ ಆತುರದಿಂದ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕ್ರಯದ ಕರಾರು ಪತ್ರಕ್ಕೆ

ಮಾಗಡಿ ನೊಂದಣಿ ಕಛೇರಿಯಲ್ಲಿ ಸಹಿ ಮಾಡಿರುತ್ತಾರೆ. ನಾವು ಎಷ್ಟು ಗಂಟೆಗೆ ನೊಂದಣಿ ಕಛೇರಿಗೆ ಹೋಗಿರುತ್ತೇವೆ ಗೊತ್ತಿಲ್ಲ. ಕ್ರಯದ ಕರಾರು ಪತ್ರ ನೊಂದಣಿಯಾದಾಗ ಸಂಜೆಯಾಗಿತ್ತು. ನೊಂದಣಿಯಾಗುವಾಗ ಸಂಜೆಯಾಗಿತ್ತು ಆದ ಕಾರಣ ಕ್ರಯದ ಕರಾರು ಪತ್ರವನ್ನು ಪ್ರತಿವಾದಿಗಳಿಗೆ ಓದಲು ಕೊಡದೇ ಆತುರದಿಂದ ಅದಕ್ಕೆ ಅವರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಪತ್ರವನ್ನು ಸಾಲದ ಪತ್ರ ಎಂದು ಪ್ರತಿವಾದಿಗಳ ಕಡೆಯಿಂದ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

22. ನಾನು ಪ್ರತಿವಾದಿಗಳಿಗೆ 10 ಲಕ್ಷದ ಚೆಕ್ ಮತ್ತು 2 ಲಕ್ಷದ ನಗದು ಹಣ ಕೊಟ್ಟಿರುತ್ತೇನೆ. ನಾನು ಚೆಕ್ ಮೂಲಕ ಹಣವನ್ನು ನನ್ನ ಹೆಂಡತಿಯ ಬ್ಯಾಂಕ್ ಖಾತೆಯಿಂದ ಕೊಟ್ಟಿರುತ್ತೇನೆ. ನನ್ನ ಹೆಂಡತಿಯ ಬ್ಯಾಂಕ್ ಖಾತೆ ಪದ್ಮನಾಭನಗರ ಬ್ರಾಂಚ್ ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಇರುತ್ತದೆ. ನನ್ನ ಹೆಂಡತಿಯ ಹೆಸರು ಇಂದಿರಮ್ಮ ಆಗಿರುತ್ತದೆ. ನಾನು ನನ್ನ ಹೆಂಡತಿಯ ಬ್ಯಾಂಕ್ ಖಾತೆಗೆ ಸಂಬಂದಿಸಿದಂತೆ ವ್ಯವಹಾರ ಮಾಡುವುದಿಲ್ಲ. ನಾನು ಪ್ರತಿವಾದಿಗಳಿಗೆ ಕೊಟ್ಟ ಚೆಕ್ ನಗದೀಕರಣ ಆಗಿರುತ್ತದೆ. ನಾನು ಕೊಟ್ಟ ಚೆಕ್ ಇಂದಿರಮ್ಮರವರಿಗೆ ಸಂಬಂದಿಸಿರುವ ಬಗ್ಗೆ ಕ್ರಯದ ಕರಾರು ಪತ್ರದಲ್ಲಿ ನಮೂದು ಇಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**